## ಕರ್ನಾಟಕ ಸರ್ಕಾರದ ನಡವಳಿ

*ವಿಷಯ:–* ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958 ರ ನಿಯಮ 247ಎ ರನ್ವಯ ನಿವೃತ್ತಿ ವೇತನಕ್ಕೆ ಎರಡು ವರ್ಷಗಳ ಹೆಚ್ಚುವರಿ ಅರ್ಹತಾ ಅವಧಿಯನ್ನು ಸೇರ್ಪಡೆ ಮಾಡುವ ಬಗ್ಗೆ –ಆದೇಶ.

*ಓದಲಾಗಿದೆ:*

1. ಮುಖ್ಯ ಇಂಜಿನಿಯರ್, ಪಂಚಾಯತ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ಮುಇಂ:ಪಂರಾಇಂಇ:ಬೆಂ:ಸಿ–9/ನಿವೃತ್ತಿ ಕನಾಸೇನಿ/247–(ಎ) ಸೌಲಭ್ಯ ಬೆ.ವೃ/2018–19/1896, ದಿನಾಂಕ:27.7.2018
2. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 4 ಎಸ್.ಆರ್.ಎ 2016, ದಿನಾಂಕ:10.4.2017.

*ಪ್ರಸ್ತಾವನೆ:–*

ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:27.7.2018 ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ನೌಕರರ ಸೇವಾ ವಿವರಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿ ಸದರಿ ನೌಕರರು 30 ವರ್ಷ ವಯೋ ಮಿತಿ ದಾಟಿದ ನಂತರ ಸೇವಾ ಸಕ್ರಮಗೊಂಡಿರುವ ಬಗ್ಗೆ ತಿಳಿಸಿ ಸದರಿಯವರಿಗೆ ಮೇಲೆ ಓದಲಾದ ಉಲ್ಲೇಖ (2)ರ ಆದೇಶದಲ್ಲಿ ಕಲ್ಪಿಸಿರುವ ಅವಕಾಶದಂತೆ ಅವರ ನಿವೃತ್ತಿ ವೇತನಕ್ಕೆ 2 ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ನೀಡುವ ಬಗ್ಗೆ ಶಿಫಾರಸ್ಸು ಮಾಡಿರುತ್ತಾರೆ.

| ಕ್ರ ಸಂ | ಹೆಸರು, ಪದನಾಮ | ಜನ್ಮ ದಿನಾಂಕ | ಸೇವೆಯಲ್ಲಿ ಸಕ್ರಮಗೊಳಿಸಿದವರ ವಿವರ ಸಕ್ರಮಗೊಳಿಸಿದ ದಿನಾಂಕ | ಸಕ್ರಮ ಗೊಂಡಾಗ ಅವರ ವಯಸ್ಸು | ನಿವೃತ್ತಿ ಹೊಂದಿದ ದಿನಾಂಕ: | ಸಲ್ಲಿಸಿರುವ ಒಟ್ಟು ಸೇವೆ |
|---|---|---|---|---|---|---|
| 1 | ಎಲ್.ಸಿದ್ದಲಿಂಗಪ್ಪ, ವಾಹನ ಚಾಲಕ | 1.7.1957 | ದಿ:01.1.1990 ಕಾ.ಇಂ, ಯಾಂತ್ರಿಕ ವಿಭಾಗ, ಗುಲ್ಬರ್ಗಾ | 32 ವರ್ಷ | 30.6.2016 | 26 ವರ್ಷ |
| 2 | ಎನ್.ಜಿ.ಜಯಣ್ಣ, ಜೋಡಣೆಗಾರ | 10.11.1957 | 26.9.1993 ಪ್ರಧಾನ ಇಂಜಿನಿಯರ್, ಜನಾರೋಗ್ಯ ಶಿಲ್ಪ ಕಾರ್ಯ ವಲಯ, ಬೆಂಗಳೂರು | 35 ವರ್ಷ | 30.11.2017 | 24 ವರ್ಷ |

ಆರ್ಥಿಕ ಇಲಾಖೆಯು ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ:10.4.2017 ರಲ್ಲಿ ದಿನಗೂಲಿ ಮೇಲೆ ನೇಮಕ ಹೊಂದಿ ನಂತರ ಸೇವಾ ವಿಲೀನಾತಿ ಪಡೆದ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247ಎ ರಡಿ ಸೌಲಭ್ಯ ವಿಸ್ತರಿಸುವ ಬಗ್ಗೆ ನೀಡಿರುವ ಮಾರ್ಗಸೂಚಿಯಲ್ಲಿ ಈ ಕೆಳಕಂಡಂತೆ ತಿಳಿಸಲಾಗಿದೆ:–

"ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 247–ಎ ರ ಅವಕಾಶಗಳನ್ವಯ ಈ ನಿಯಮಗಳ ಸೌಲಭ್ಯವು ನೇರ ನೇಮಕಾತಿ ಹೊಂದಿದ ಸರ್ಕಾರಿ ನೌಕರರಿಗೆ ಅನ್ವಯವಾಗುತ್ತಿದ್ದು, ದಿನಗೂಲಿ/ಮಿತವೇತನ ಪದವೀಧರರಾಗಿ ಕಾರ್ಯನಿರ್ವಹಿಸಿ ನಂತರ ಸರ್ಕಾರಿ ಸೇವೆಯಲ್ಲಿ

---2

ಸಕ್ರಮಗೊಂಡ ಸರ್ಕಾರಿ ನೌಕರರಿಗೆ ಅನ್ವಯವಾಗುವುದಿಲ್ಲವೆಂಬ ನಿಬಂಧನೆಯಿದ್ದರೂ, ನ್ಯಾಯಾಲಯಗಳ
ತೀರ್ಪುಗಳ ಹಿನ್ನೆಲೆಯಲ್ಲಿ ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 6ರ
ಅವಕಾಶದಂತೆ ಈ ವರ್ಗದ ಸರ್ಕಾರಿ ನೌಕರರಿಗೂ ಸಹ ನೇರ ನೇಮಕಾತಿಯಿಂದ ನೇಮಕಗೊಂಡ
ಇತರೆ ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ಗರಿಷ್ಠ 2 ವರ್ಷಗಳ ಅರ್ಹತಾದಾಯಕ ಸೇವೆಯನ್ನು
ಪಿಂಚಣಿ ಉದ್ದೇಶಕ್ಕೆ ಅಧಿಕ ಅರ್ಹತಾದಾಯಕ ಸೇವೆಯನ್ನು ಪರಿಗಣಿಸಲು ಅನುಮತಿಸಲಾಗಿದೆ
ನಿಯಮ247-ಎ ರಲ್ಲಿನ ಅವಕಾಶಗಳನ್ವಯ ಹೆಚ್ಚುವರಿ ಸೇವೆ ಸೇರ್ಪಡೆ ಕುರಿತು ಪ್ರಕರಣಗಳನ್ನು
ಆಡಳಿತ ಇಲಾಖೆಯು ಸಂಬಂಧಪಟ್ಟ ಎಲ್ಲಾ ಅಗತ್ಯ ಮಾಹಿತಿ ದಾಖಲೆಗಳೊಂದಿಗೆ ಪರಿಶೀಲಿಸಿ, ಅರ್ಹ
ಪ್ರಕರಣಗಳಲ್ಲಿ ಸೂಕ್ತ ಆದೇಶ ಹೊರಡಿಸಲು ಆಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯ
ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ ಮತ್ತು ಇಲಾಖಾ ಕಾರ್ಯದರ್ಶಿಗಳು
ಅಧಿಕಾರಯುಕ್ತವಾಗಿರುವರು"

ಮೇಲಿನ ಆದೇಶವು ದಿನಗೂಲಿ ಮೇಲೆ ನೇಮಕ ಹೊಂದಿ ಸಕ್ರಮಗೊಂಡ ನೌಕರರಿಗೆ ನಿಯಮ 247ಎ ರಡಿ ಸೌಲಭ್ಯ ವಿಸ್ತರಿಸುವುದಕ್ಕೆ ಅವಕಾಶ ಕಲ್ಪಿಸಿರುವುದರಿಂದ ಶ್ರೀ ಎಲ್.ಸಿದ್ದಲಿಂಗಪ್ಪ, ನಿವೃತ್ತ ವಾಹನ ಚಾಲಕ ಮತ್ತು ಶ್ರೀ ಎನ್.ಜಿ.ಜಯಣ್ಣ, ನಿವೃತ್ತ ಜೋಡಣೆಗಾರ ಇವರುಗಳು 30 ವರ್ಷ ವಯೋಮಿತಿ ದಾಟಿದ ನಂತರ ಸೇವಾ ಸಕ್ರಮಾತಿ ಹೊಂದಿರುವುದರಿಂದ ಅವರಿಗೆ ಕೆ.ಸಿ.ಎಸ್.ಆರ್ ನಿಯಮ 247ಎ ರ ಅನುಸಾರ ಅವರ ನಿವೃತ್ತಿ ವೇತನಕ್ಕೆ 2 ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಸೇರ್ಪಡೆ ಮಾಡಲು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ ಈ ಆದೇಶ.

**ಆದೇಶ ಸಂಖ್ಯೆ:ಗ್ರಾಅಪ 309 ಜಿಪಅ 18, ಬೆಂಗಳೂರು, ದಿನಾಂಕ:24.8.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು ಶ್ರೀ ಎಲ್.ಸಿದ್ದಲಿಂಗಪ್ಪ, ನಿವೃತ್ತ ವಾಹನ ಚಾಲಕ ಮತ್ತು ಶ್ರೀ ಎನ್.ಜಿ.ಜಯಣ್ಣ, ನಿವೃತ್ತ ಜೋಡಣೆಗಾರ ಇವರುಗಳಿಗೆ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 4 ಎಸ್.ಆರ್.ಎ 2016, ದಿನಾಂಕ:10.4.2017 ರಲ್ಲಿ ಕಲ್ಪಿಸಿರುವ ಅವಕಾಶದಂತೆ ತಕ್ಷಣದಿಂದ ಜಾರಿಗೆ ಬರುವಂತೆ ಅವರ ನಿವೃತ್ತಿ ವೇತನ ಸೌಲಭ್ಯಕ್ಕೆ 2 (ಎರಡು) ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಸೇರ್ಪಡೆ ಮಾಡಿ ಆದೇಶಿಸಿದೆ.

ಈ ಆದೇಶದನುಸಾರ ಲಭ್ಯವಾಗುವ ಸೌಲಭ್ಯಗಳನ್ನು ಮೇಲ್ಕಂಡ ನಿವೃತ್ತ ನೌಕರರಿಗೆ ಕಲ್ಪಿಸುವ ದಿಸೆಯಲ್ಲಿ ಮಹಾಲೇಖಪಾಲರೊಂದಿಗೆ ಪತ್ರ ವ್ಯವಹಾರ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

24/08/2018

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.

2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
3. ಸಂಬಂಧಿಸಿದ ನೌಕರರಿಗೆ (ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಮುಖಾಂತರ)
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ಸೇವೆಗಳು-1).
5. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಉಪ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
6. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.